ಅಧ್ಯಕ್ಷರು :– ಅದರ ಬಗ್ಗೆ ನಾಳೆ ನೋಡೋಣ. ರಿ– ಎಕ್ಸಾಮಿನ್ ಮಾಡಿದ ಮೇಲೆ ಆ ಬಗ್ಗೆ ಹೇಳುತ್ತೇನೆ. ಈಗ ದಯವಿಟ್ಟು ಬಾಬಿಯಿಂದ ತಮ್ಮ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳಿ. ಸೋಮಶೇಖರ್‌ರವರೆ, ತಾವು ಮಾತನಾಡಿ.

(ಧರಣಿ ನಿರತರಾಗಿದ್ದ ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು ಧರಣಿ ಹಿಂತೆಗೆದು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು)

2) ವಿಷಯ :– ರಾಜ್ಯದಲ್ಲಿ ಡೆಂಗ್ಯುಜ್ವರ ನಿಯಂತ್ರಣದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಡೆಂಗ್ಯು ಜ್ವರದ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಮೊನ್ನೆ ತಾನೇ ಮಂಡ್ಯ ನಗರದಲ್ಲಿ ಪ್ರವೀಣ್‌ಕುಮಾರ್ ಎನ್ನುವ ಪ್ರೌಢಶಾಲಾ ಶಿಕ್ಷಕನಿಗೆ ಡೆಂಗ್ಯು ಜ್ವರ ಬಂದು ತಕ್ಷಣ ಬೆಂಗಳೂರಿಗೆ ಕರೆದುಕೊಂಡು ಬಂದರೂ ಕೂಡ ಚಿಕಿತ್ಸೆ ಫಲಪ್ರದವಾಗದೇ ಮೂಗಿನಲ್ಲಿ ರಕ್ತ ಬಂದು ಪರೀಕ್ಷೆ ಮಾಡಿದವರು ಈತ ಇದೇ ಜ್ವರದಿಂದ ಸತ್ತಿದ್ದಾನೆ ಎಂದು ಹೇಳಿದ್ದಾರೆ. ಇನ್ನು ಆರೋಗ್ಯ ಸಚಿವರು ಹೇಳಿಕೆಯನ್ನು ಕೊಟ್ಟು ಇಡೀ ರಾಜ್ಯದಲ್ಲಿ ಡೆಂಗ್ಯು ಜ್ವರಕ್ಕೆ 192 ಜನರು ಬಲಿಯಾಗಿದ್ದಾರೆ ಎಂದು ಹೇಳಿದ್ದಾರೆ.ನನಗೆ ಅನ್ನಿಸುತ್ತಿದೆ, 192 ಅಲ್ಲ, ನಿಮ್ಮ ಗಮನಕ್ಕೆ ಮಾತ್ರ ಅಷ್ಟು ಸಂಖ್ಯೆ ಎಂದು ಬಂದಿರಬಹುದು. ಗಮನಕ್ಕೆ ಬಾರದೇ ಇರತಕ್ಕಂಥ ಸಾವಿರಾರು ಪ್ರಕರಣಗಳು ಈ ರಾಜ್ಯದಲ್ಲಿ ಇವೆ. ಚಾಮರಾಜನಗರ, ಹಾಗು ಮಾನ್ಯ ಅಧ್ಯಕ್ಷರೆ, ತಮ್ಮ ಜಿಲ್ಲೆಯಾದ ಕೋಲಾರದ ಮಾಲೂರು ಒಂದರಲ್ಲಿಯೇ 100 ಪ್ರಕರಣ ಎಂದು ಬಂದಿದೆ. ಈಗ ಇದರಲ್ಲಿ ಅರ್ಧ ಭಾಗ ಕೋಲಾರ ಜಿಲ್ಲೆಯೊಂದರಲ್ಲಿಯೇ ಇದೆ. ಇದಕ್ಕೆ ಕಾರಣ ಏನೆಂದರೆ ಕುಡಿಯುವ ನೀರಿನ ಕೆಳಗಡೆ ಲವಣಾಂಶ ಜಾಸ್ತಿಯಾಗಿ ಅದರಿಂದಾಗಿ ಈ ರೀತಿಯ ಜ್ವರ ಬಂದಿದೆ ಎಂದು ಹೇಳಲಾಗಿದೆ. ಇದೊಂದೇ ಕಡೆಯಲ್ಲದೇ ಹಾಸನದಲ್ಲೂ ಕೂಡ ಒಬ್ಬ ಸಮರ್ಥ್ ಎನ್ನುವ ಹುಡುಗನೊಬ್ಬ ಸತ್ತಿದ್ದಾನೆ. ಚಾಮರಾಜನಗರದಲ್ಲಿ ಈ ಡೆಂಗ್ಯು ಜ್ವರಕ್ಕೆ ಆರು ಜನರು ಬಲಿಯಾಗಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಬೆಂಗಳೂರು ನಗರದಲ್ಲಂತೂ ಅನೇಕ ಸ್ಲಮ್‌ಗಳಲ್ಲಿ ಇದರ ಹಾವಳಿ ಜಾಸ್ತಿಯಾಗಿದೆ. ಕೆಲವು ಕಡೆ ಔಷಧಿಗಳು ಸರಿಯಾಗಿ ಸಪ್ಲೈ ಆಗುತ್ತಿಲ್ಲವೆಂದು ಪತ್ರಿಕೆಗಳಲ್ಲಿ ಬಂದಿದೆ. ಇದಲ್ಲದೆ ಸರಿಯಾಗಿ ಚಿಕಿತ್ಸೆ ಕೂಡ ಆಗುತ್ತಿಲ್ಲವೆನ್ನುವ ವರದಿ ಬಂದಿದೆ. ಇಷ್ಟೊಂದು ತೀವ್ರತರವಾಗಿರತಕ್ಕಂಥ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಗಳಗನ್ನು ತೆಗೆದುಕೊಂಡಿದ್ದಾರೆ, ಎಷ್ಟು ಔಷಧಿಗಳನ್ನು ಪೂರೈಕೆ ಮಾಡಿದ್ದಾರೆ, ಇದಕ್ಕೆ ಏನು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ಏಕೆಂದರೆ ಜನರು ಬಹಳ ಗಾಭರಿಯಾಗಿದ್ದಾರೆ. ಮಂಡ್ಯದಲ್ಲಿರಬಹುದು, ಬೇರೆ ಭಾಗಗಳಲ್ಲಿರಬಹುದು. ಏಕೆಂದರೆ ಜ್ವರ ಬಂದ ತಕ್ಷಣ ಇದು ಯಾವ ಜ್ವರವೋ, ಏನೋ ಎಂದು ಜನರು ಬಹಳ ಗಾಬರಿಯಾಗಿದ್ದಾರೆ. ಆದುದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ಆರೋಗ್ಯ ಸಚಿವರು ಸದನದಲ್ಲಿ ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಇದಕ್ಕೆ ನಾಳೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು :– ಆಯಿತು, ಈಗ ಮಾನ್ಯ ವೇಳೆಯ ಪ್ರಸ್ತಾಪಗಳು ಸಾಕು.

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಶ್ರೀ ಚೆಲುವನಾರಾಯಣಸ್ವಾಮಿ :– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ನನ್ನದೂ ಒಂದು ವಿಷಯ ಇತ್ತು.

ಅಧ್ಯಕ್ಷರು :– ಈಗ ಯಾರಿಗೂ ಅವಕಾಶ ಇಲ್ಲ. ಮಿಕ್ಕಿರುವ ಇತರ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ಅರಗ ಜ್ಞಾನೇಂದ್ರವರು ಪ್ರಸ್ತಾಪ ಮಾಡುವ ಪ್ರಿವಿಲೇಜ್ ಇದೆ. ಎರಡು ನಿಮಿಷ ಅವರಿಗೆ ಅವಕಾಶ ಕೊಡುತ್ತೇನೆ. ಅದು ಮುಗಿದ ನಂತರ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಅರಗ ಜ್ಞಾನೇಂದ್ರರವರೆ, ತಾವು ಹೇಳಿ.

4. ಹಕ್ಕುಚ್ಯುತಿ ನಿರ್ಣಯ ಮಂಡನೆಗೆ ಅವಕಾಶ ಕೋರಿಕೆ

ವಿಷಯ :– ಸದನದಲ್ಲಿ ಪ್ರಶ್ನೆಯನ್ನು ಕೇಳುವುದನ್ನು ಪ್ರಶ್ನಿಸಿರುವ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ ತೀರ್ಥಹಳ್ಳಿ :– ಮಾನ್ಯ ಅಧ್ಯಕ್ಷರೆ, ನಿಯಮ 191ರ ಪ್ರಕಾರ ನಾನು ಒಂದು ಹಕ್ಕುಚ್ಯುತಿ ನಿರ್ಣಯವನ್ನು ತಮಗೆ ಈಗಾಗಲೇ ಬರೆದು ಕಳುಹಿಸಿದ್ದೇನೆ. ಈ ಸದನದಲ್ಲಿ ಪ್ರಶ್ನೆಯನ್ನು ಕೇಳುವುದು ಹಾಗೂ ಅದಕ್ಕೆ ಉತ್ತರವನ್ನು ಪಡೆಯುವುದು ಪ್ರತಿಯೊಬ್ಬ ಸದಸ್ಯನ ಹಕ್ಕು ಆಗಿರುತ್ತದೆ. ನಾವು ಇಲ್ಲಿ ಕೆಲಸ ಮಾಡಬೇಕು ಎಂದರೆ ನಮಗೆ ಅನೇಕ ಮಾಹಿತಿಗಳು ಅಗತ್ಯವಾಗಿರುತ್ತವೆ. ಸರ್ಕಾರ ಹಾಗೂ ರಾಜ್ಯದ ಅಭಿವೃದ್ಧಿಯ ಗತಿಯನ್ನು ಹೆಚ್ಚು ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಸದನದ ನಾವುಗಳೆಲ್ಲ ಸದಸ್ಯರುಗಳೂ ಅನೇಕ ಪ್ರಶ್ನೆಗಳನ್ನು ಹಾಕುತ್ತೇವೆ ಮತ್ತು ಅದಕ್ಕೆ ಮಾಹಿತಿಗಳನ್ನು ಪಡೆಯುತ್ತೇವೆ ಮತ್ತು ಇಲಾಖೆಯನ್ನು ಎಚ್ಚರಿಸುವಂಥ ದೃಷ್ಟಿಯಿಂದಲೂ ಕೂಡ ನಾವು ಅನೇಕ ಪ್ರಶ್ನೆಗಳನ್ನು ಹಾಕುತ್ತೇವೆ. ನಾನು ಕೂಡ ಇದೇ ದೃಷ್ಟಿಯಿಂದಲೇ ಈ ಸದನದಲ್ಲಿ ಒಂದು ಪ್ರಶ್ನೆಯನ್ನು ಹಾಕಿದ್ದೆ. ಅದೂ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂಥದ್ದು. ಕಳೆದ ಹದಿನಾಲ್ಕು, ಹದಿನೈದು ವರ್ಷಗಳಿಂದ ನನ್ನ ಕ್ಷೇತ್ರದ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಅನೇಕ ಅಡೆತಡೆಗಳು ಉಂಟಾಗಿವೆ. ರಸ್ತೆ ಮಾಡುವುದಕ್ಕೆ ತಡೆಯಾಗಿದೆ. ಬೇರೆಯವರು ಇಂಜಂಕ್ಷನ್ ಆರ್ಡರ್ ತೆಗೆದುಕೊಂಡಿದ್ದಾರೆ. ಶಾಲಾ ಕಟ್ಟಡಗಳಿಗೆ ಕೂ ಇಂಜಕ್ಷನ್ ಆರ್ಡರ್ ಕೆಲವು ಪ್ರೈವೇಟ್ ಪಾರ್ಟಿಗಳು ತೆಗೆದುಕೊಂಡಿದ್ದಾರೆ. ವೆಟರ್ನರಿ ಆಸ್ಪತ್ರೆಯನ್ನು ನಿರ್ಮಾಣ ಮಾಡುವಾಗ ಇಂಜೆಂಕ್ಷನ್ ಆರ್ಡರ್ ತೆಗೆದುಕೊಂಡು ಬಂದಿದ್ದರಿಂದ ಅದು ಅರ್ಧಕ್ಕೆ ನಿಂಗುಹೋಗಿದೆ ಕಳೆದ ಅನೇಕ ವರ್ಷಗಳಿಂದ ನಾವು ಸಾರ್ವಜನಿಕ ಹಣವನ್ನು ಜಿಲ್ಲಾಪರಿಷತ್ತು ಕಡಯಿಂದ ಹಾಕಿದ್ದೇವೆ. ಆದರೆ ಇಲ್ಲಿ ಕೆಲಸ ಮಾಡುವುದಕ್ಕೆ ಬಿಡುತ್ತಿಲ್ಲ. ಅಡತಡೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :– ಮಾನ್ಯ ಅಧ್ಯಕ್ಷರೆ, ವೆಟರ್ನರಿ ಆಸ್ಪತ್ರೆ ವಿಚಾರ ಏನು ಪ್ರಸ್ತಾಪ ಮಾಡುತ್ತಿದ್ದಾರೆ....

ಅಧ್ಯಕ್ಷರು :– ಅದಲ್ಲ, ಪ್ರವಿಲೇಜ್,

ಶ್ರೀ ಅರಗ ಜ್ಞಾನೇಂದ್ರ :– ಅನೇಕ ಅಡಚಣೆಗಳು ಆಗಿವೆ. ಪ್ರಕರಣಗಳು ಕೋರ್ಟಿಗೆ ಹೋಗಿವೆ. ಕೋರ್ಟ್‌ನಿಂದ ನಮಗೆ ಇತ್ಯರ್ಥವಾಗುತ್ತಿಲ್ಲ. ಜಿಲ್ಲಾಪರಿಷತ್ತು ಪರವಾಗಿ ಯಾರು ವಾದ ಮಾಡಬೇಕಾಗಿತ್ತೋ ಅಂಥ ಕೇಸುಗಳು ತಾಲ್ಲೂಕಿನ ಮುನ್ಸೀಫ್ ಕೋರ್ಟ್‌ನಲ್ಲಿ ಇವೆ.

ಶ್ರೀ ಕಾಗೋಡು ತಿಮ್ಮಪ್ಪ :– ಮಾನ್ಯ ಅಧ್ಯಕ್ಷರೆ, ಯಾವ ವಿಷಯದ ಬಗ್ಗೆ,

ಶ್ರೀ ಅರಗ ಜ್ಞಾನೇಂದ್ರ :– ಅದನ್ನು ನಾನು ಹೇಳುತ್ತೇನೆ, ನನಗೆ ಅವಕಾಶ ಕೊಡಿ. ಸ್ವಲ್ಪ ತಾಳ್ಮೆ ತೆಗೆದುಕೊಳ್ಳಿ, ಇನ್ನೊಂದು ಐದು ನಿಮಿಷದಲ್ಲಿ ಅರ್ಥವಾಗುತ್ತದೆ. ನಾನು ಹೇಳುತ್ತೇನೆ. ಇಂತಹ